ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಗೊಟ್ಟಿಗೆರೆ ವಾರ್ಡ್ ಸಂಖ್ಯೆ-194,

ವಾರ್ಡ್ ಕಛೇರಿಯಲ್ಲಿ ದಿನಾಂಕ: 03-05-2021 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

| ಹಾಜರಿದ್ದವರು | ಗೈರುಹಾಜರು |
|---|---|
| 1. ಅಧ್ಯಕ್ಷರು, ಗೊಟ್ಟಿಗೆರೆ, ವಾರ್ಡ್ ಸಮಿತಿ, ಬೊಮ್ಮನಹಳ್ಳಿ, ಬೆಂಗಳೂರು.<br>2. ಹಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಕಾರ್ಯದರ್ಶಿ, ವಾರ್ಡ್ ನಂ. 194, ಗೊಟ್ಟಿಗೆರೆ.<br>3. ವೈದ್ಯಾಧಿಕಾರಿಗಳು, ಗೊಟ್ಟಿಗೆರೆ.<br>4. ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ), ಗೊಟ್ಟಿಗೆರೆ.<br>5. ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ), ಗೊಟ್ಟಿಗೆರೆ<br>6. ವಾರ್ಡ ಸಹಾಯಕ ಅಭಿಯಂತರರು ವಾರ್ಡ್ ನಂ.194, ಗೊಟ್ಟಿಗೆರೆ.<br><br>ಸ್ಥಳೀಯ ಸಂಘ ಸದಸ್ಯರು:-<br>1. ಅಧ್ಯಕ್ಷರು, ಸೌತ್ ಅವೆನ್ಯೂ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್, ಗೊಟ್ಟಿಗೆರೆ.<br>2. ಅಧ್ಯಕ್ಷರು, ಹಿಮಗಿರಿ ಮೆಡೋಸ್, ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್, ಗೊಟ್ಟಿಗೆರೆ.<br>3. ಅಧ್ಯಕ್ಷರು, ರಾಯಲ್ ಕೌಂಟಿ, 1ನೇ ಹಂತ, ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್, ಗೊಟ್ಟಿಗೆರೆ.<br>4. ಅಧ್ಯಕ್ಷರು, ಪರಿವರ್ತನ ಸಂಘ, ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್, ಗೊಟ್ಟಿಗೆರೆ.<br>5. ಅಧ್ಯಕ್ಷರು, ಸುರಭಿನಗರ<br>6. ಅಧ್ಯಕ್ಷರು, ಕ್ಲಾಸಿಕ್ ಆರ್ಚರ್ಡ್ಸ್, ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್, ಗೊಟ್ಟಿಗೆರೆ. | 1. ಸಂಚಾರಿ ಇನ್ಸ್‌ಪೆಕ್ಟರ್, ಗೊಟ್ಟಿಗೆರೆ.<br>2. ತೋಟಗಾರಿಕೆ ಇಲಾಖೆ<br>3. ಅಭಿಯಂತರು (ಬೃಹತ್ ರಸ್ತೆಗಳು) |

ದಿನಾಂಕ: 03-05-2021 ರಂದು ಪೂರ್ವಾಹ್ನ 11:30 ಘಂಟೆಗೆ ನಡೆಸಲಾದ ವಾರ್ಡ್ ಸಮಿತಿ ಸಭೆಯಲ್ಲಿ ಅಧ್ಯಕ್ಷರು ರವರು ಸಭೆಯಲ್ಲಿ ಎಲ್ಲರನ್ನು ಸ್ವಾಗತಿಸುತ್ತಾ, ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸುತಾ.

1. ಕೋವಿಡ್-19 ಸಂಬಂಧ ಸೋಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಂಜಾಗ್ರತ ಬಗ್ಗೆ.

**(i)** ವೈದ್ಯಾಧಿಕಾರಿಗಳು, ಪಿ.ಹೆಚ್.ಸಿ, ಗೊಟ್ಟಿಗೆರೆ ಹಾಗೂ ವಾರ್ಡ್‌ಗೆ ಹೊಸದಾಗಿ ನೇಮಕವಾಗಿರುವ ಡಾ. ಸ್ಫೂರ್ತಿ ರವರು ಮಾತನಾಡುತ್ತಾ ಗೊಟ್ಟಿಗೆರೆ ವಾರ್ಡ್ ವ್ಯಾಪ್ತಿಯಲ್ಲಿನ ಹೋಂ ಐಸೋಲೇಷನ್ ಪ್ರಕರಣಗಳ ಮೇಲ್ವಿಚಾರಣೆಗಾಗಿ ಮೂರು ತಂಡಗಳು ಹಾಗೂ ಎಂ.ಓ.ಹೆಚ್ ರವರ ನೇತೃತ್ವದಲ್ಲಿ ಕೋವಿಡ್ ಟೆಸ್ಟಿಂಗ್‌ಗಾಗಿ ಮೂರು ತಂಡಗಳನ್ನು ನಿರ್ಮಿಸಿರುವುದಾಗಿ ಸಭೆಗೆ ತಿಳಿಸಿದರು. ಅರ್ಹರಿರುವ ಸಾರ್ವಜನಿಕರು ಅಂ–ಘುಟಿ, ಆರೋಗ್ಯ ಸೇತು ಅಥವಾ ಸರ್ಕಾರಿ/ಬಿಬಿಎಂಪಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಖಾಸಗಿ ಆಸ್ಪತ್ರೆಗಳಿಗೆ ಭೇಟಿ ನೀಡುವ ಮೂಲಕ ಲಸಿಕೆಯನ್ನು ಪಡೆಯಬಹುದಾಗಿದೆ ಎಂದು ಸಭೆಗೆ ತಿಳಿಸಿದರು. ವ್ಯಾಕ್ಸಿನ್ ಲಭ್ಯತೆಯ ಬಗ್ಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಮಾಹಿತಿ ಪಡೆಯಬಹುದಾಗಿ ತಿಳಿಸಿದರು.

**(ii)** ಬೆಂಗಳೂರು ಆದ್ಯಂತ ಕೋವಿಡ್ ಪ್ರಕರಣಗಳು ಹೆಚ್ಚಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ದಿನಾಂಕ: 26–04–2021 ರಂದು ಸರ್ಕಾರವು ಹೊರಡಿಸಿರುವ ಆದೇಶದನ್ವಯ ಕ್ರಮವಹಿಸಲು ಹಾಗೂ ಅರ್ಹರಿರುವ ಸಾರ್ವಜನಿಕರು ಲಸಿಕೆಯನ್ನು ಪಡೆಯಲು ಕೋರಲಾಯಿತು.

2. ವಾರ್ಡ್ ವ್ಯಾಪ್ತಿಯಲ್ಲಿ ವಿದ್ಯುತ್ ಸರಬರಾಜು ಸಂಬಂಧಿಸಿದ ವಿಷಯಗಳ ಬಗ್ಗೆ.

**(I)** ಅಧ್ಯಕ್ಷರು, ಸೌತ್ ಅವಿನ್ಯೂ ಬಡಾವಣೆಯವರು 2ನೇ ಕ್ರಾಸ್‌ನಲ್ಲಿರುವ ಕೇಬಲ್‌ಗಳು ಸರಿಪಡಿಸಿರುವುದಾಗಿ ತಿಳಿಸಿರುತ್ತಾರೆ.

**(II)** ಅಧ್ಯಕ್ಷರು, ರಾಯಲ್ ಕೌಂಟಿ, ಸೌತ್ ಅವಿನ್ಯೂ ಹಾಗೂ ಬಿ.ಡಿ.ಎ ಬಡಾವಣೆಗಳಲ್ಲಿ ದಿನನಿತ್ಯ ವಿದ್ಯೂತ್ ಸರಬರಾಜಿನಲ್ಲಿ ಏರುಪೇರು ಉಂಟಾಗುತ್ತಿದ್ದು ಹಲವಾರು ಬಾರಿ ಸಮಸ್ಯೆಗಳನ್ನು ಬಗೆಹರಿಸಲು ಕೋರಿದ್ದು ಕೂಡಲೇ ಸರಿಪಡಿಸಲು ಕೋರಿರುತ್ತಾರೆ.

**(III)** ಅಧ್ಯಕ್ಷರು, ಹಿಮಗಿರಿ ಮೆಡೋಸ್ ರವರು ತಮ್ಮ ಬಡಾವಣೆಯಲ್ಲಿ ಪ್ಯಾನೆಲ್ ಮತ್ತು ಕೇಬಲಿಂಗ್ ಕಾಮಗಾರಿಯನ್ನು ಪೂರೈಸುವ ಸಂಬಂಧ ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ) ರವರು ಸ್ಥಳ ಪರಿಶೀಲನೆ ನಡೆಸಿದ್ದು, ಕಾಮಗಾರಿಯನ್ನು ತ್ವರಿತವಾಗಿ ಕೈಗೊಳ್ಳಲು ಕೋರಿರುತ್ತಾರೆ. ಶ್ರೀ ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ) ರವರು ಮೇಲ್ಕಂಡ ವಿಷಯದ ಬಗ್ಗೆ ಅಗತ್ಯ ಕ್ರಮ ವಹಿಸಿ ಮುಂದಿನ ಸಭೆಗೆ ಹಾಜರಾಗಿ ವರದಿ ನೀಡುವುದು.

3. ವಾರ್ಡ್ ವ್ಯಾಪ್ತಿಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಂದ ಅನುಷ್ಠಾನಗೊಳ್ಳುತ್ತಿರುವ ಕುಡಿಯುವ ನೀರು ಹಾಗೂ ಒಳಚರಂಡಿ ಕಾಮಗಾರಿಗಳ ಪ್ರಗತಿ ಮತ್ತು ಸಂಬಂಧಿಸಿದ ವಿಷಯಗಳ ಬಗ್ಗೆ.

1. ಸೌತ್ ಅವಿನ್ಯೂ ಬಡವಾಣೆಯ 7ನೇ ಕ್ರಾಸ್‌ನಲ್ಲಿ ಒಳಚರಂಡಿ ನೀರು ಸರಾಗವಾಗಿ ಹರಿಯುವಂತೆ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗಿರುತ್ತದೆ. ಮುಂದುವರೆದು 8ನೇ ಕ್ರಾಸ್‌ನಲ್ಲಿ ಒಳಚರಂಡಿ ನೀರು ಸರಾಗವಾಗಿ ಹರಿಯದೆ ಇರುವುದನ್ನು ಸಹ ದುರಸ್ತಿಪಡಿಸಲು ಕೋರಿರುತ್ತಾರೆ.
2. ಕೆಂಬತಹಳ್ಳಿ ಮುಖ್ಯರಸ್ತೆಯಲ್ಲಿ ಎರಡು ಮ್ಯಾನ್‌ಹೋಲ್ ಕವರ್‌ಗಳು ದುರಸ್ತಿ ಕಾರ್ಯವನ್ನು ಕೈಗೊಂಡಿರುವುದಾಗಿ ಸಭೆಯಲ್ಲಿ ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ತಿಳಿಸಿದರು.

Scanned by CamScanner

3. ಬನ್ನೇರುಘಟ್ಟ ಮುಖ್ಯರಸ್ತೆಯಲ್ಲಿ ಮೆಟ್ರೋ ಕಾಮಗಾರಿಯಿಂದ ದುರಸ್ತಿಗೊಂಡಿದ್ದ ಮುಖ್ಯಪೈಪ್‌ಅನ್ನು ಸರಿಪಡಿಸಲಾಗಿದ್ದು, ಸಂಬಂಧಪಟ್ಟ ಬಡಾವಣೆಗಳಿಗೆ ಸರಾಗವಾಗಿ ನೀರು ಸರಬರಾಜು ಮಾಡುತ್ತಿರುವುದಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ.) ತಿಳಿಸಿರುತ್ತಾರೆ.

4. ರಾಯಲ್ ಕೌಂಟಿ ಹಾಗೂ ಬಿ.ಡಿ.ಎ ಬಡಾವಣೆಗಳಲ್ಲಿ ಮೂರು ನಾಲ್ಕು ದಿನಗಳಿಗೊಮ್ಮೆ ನೀರು ಸರಬರಾಜು ಮಾಡುತ್ತಿದ್ದು, ಸಂಬಂಧಪಟ್ಟ ನಿರ್ವಾಹಣ ಅಭಿಯಂತರರು ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

5. 7ನೇ ಬ್ಲಾಕ್, 9ನೇ ಹಂತ ಜೆ.ಪಿ. ನಗರದಲ್ಲಿ ಶೇಕಡ 50 ರಷ್ಟು ಮ್ಯಾನಹೋಲ್ ಗಳನ್ನು ದುರಸ್ತಿಗೊಳಿಸಿದ್ದು ಉಳಿಕೆ ಕಾಮಗಾರಿಯನ್ನು ತ್ವರಿತವಾಗಿ ಕೈಗೊಳ್ಳಲು ಅಧ್ಯಕ್ಷರು ಕೋರಿರುತ್ತಾರೆ.

6. 2ನೇ □ಬಿ□ ಕ್ರಾಸ್, 1ನೇ ಮುಖ್ಯ ರಸ್ತೆ, ಸುರಭಿನಗರದಲ್ಲಿ ಮ್ಯಾನಹೋಲ್‌ಗಳ ಎತ್ತರವು ರಸ್ತೆಯ ಎತ್ತರಕ್ಕಿಂತ ತಗ್ಗಾಗಿದ್ದು, ಇದನ್ನು ಸರಿಪಡಿಸಲು ಕೋರಿರುತ್ತಾರೆ.

ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ.) ರವರು ಮೇಲ್ಕಂಡ ವಿಷಯಗಳ ಬಗ್ಗೆ ಕ್ರಮ ವಹಿಸಿ ಮುಂದಿನ ಸಭೆಗೆ ಹಾಜರಾಗಿ ವರದಿ ನೀಡುವುದು.

4. ರಸ್ತೆ, ಪಾದಚಾರಿ ಹಾಗೂ ಮಳೆ ನೀರು ಚರಂಡಿ ಕಾಮಗಾರಿ ಬಗ್ಗೆ.

(1) ಅಧ್ಯಕ್ಷರು, ಕ್ಲಾಸಿಕ್ ಆರ್ಚಿಡ್ಸ್ ಬಡಾವಣೆಯಲ್ಲಿ ಉಳಿದಿರುವ ಕೆಲ ರಸ್ತೆಗಳ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಕೋರಿರುತ್ತಾರೆ. ಪಾಲಿಕೆಯ ಅಭಿಯಂತರರು ಪ್ರಸ್ತುತ ವರ್ಷದಲ್ಲಿ ಸದರಿ ಕಾಮಗಾರಿಯನ್ನು ಕೈಗೊಳ್ಳಲು ಕ್ರಮವಹಿಸುತ್ತಿದ್ದು, ಅಂದಾಜು ಆರು ತಿಂಗಳುಗಳಲ್ಲಿ ಅನುಷ್ಠಾನಗೊಳಿಸಬಹುದಾಗಿದೆ ಎಂದು ಸಭೆಗೆ ತಿಳಿಸಿದರು.

(2) ರಾಯಲ್ ಕೌಂಟಿ ಬಡಾವಣೆಯ 80 ಅಡಿರಸ್ತೆ, 7ನೇ ಬ್ಲಾಕ್, 9ನೇ ಹಂತ, ಜೆ.ಪಿ.ನಗರ, ಶಂಕರ್‌ನಾಗ್ ರಸ್ತೆಗಳಲ್ಲಿ ಉಬ್ಬು ನಿರ್ಮಾಣ ಮಾಡಲು ಹಿಂದಿನ ಸಭೆಗಳಲ್ಲಿ ಸೂಚಿಸಿದ್ದು, ಈ ಸಂಬಂಧ ವಾರ್ಡ್ ಇಂಜಿನಿಯರ್ ರವರು ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ಅಭಿಯಂತರರೊಂದಿಗೆ ಅಗತ್ಯ ಕ್ರಮ ವಹಿಸಲು ಸೂಚಿಸಲಾಯಿತು.

5. ಮಳೆ ನೀರು ಸಂಗ್ರಹಣೆ ಕಾರ್ಯವನ್ನು ವಾರ್ಡ್ ವ್ಯಾಪ್ತಿಯಲ್ಲಿ ಕೈಗೊಳ್ಳುವುದು

ವಾರ್ಡ್ ವ್ಯಾಪ್ತಿಯಲ್ಲಿ ಕೈಗೊಂಡಿರುವ ಮಳೆ ನೀರು ಕೊಯ್ಲು ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಸೌತ್ ಅವೆನ್ಯೂ, ರಾಯಲ್ ಕೌಂಟಿ ಅಧ್ಯಕ್ಷರುಗಳು ಕೋರಿದ್ದು, ಈ ನಿಟ್ಟಿನಲ್ಲಿ ವಾರ್ಡ್ ಅಭಿಯಂತರರು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

Scanned by CamScanner

6. ಘನತ್ಯಾಜ್ಯ ನಿರ್ವಹಣೆಯ ಬಗ್ಗೆ:

ಆರೋಗ್ಯ ಪರಿವೀಕ್ಷಕರು ಕ್ಲಾಸಿಕ್ ಆರ್ಚಿಡ್ಸ್ ಬಡಾವಣೆಯಲ್ಲಿ ಒಣಕಸವನ್ನು ಸಮರ್ಪಕವಾಗಿ ಸಂಗ್ರಹಿಸುವಂತೆ ಗುತ್ತಿಗೆದಾರರಿಗೆ ಸೂಚಿಸಿರುವುದಾಗಿ ಸಭೆಯಲ್ಲಿ ತಿಳಿಸಿದರು.

ಈ ಮೇಲೆ ತಿಳಿಸಿರುವ ಎಲ್ಲಾ ವಿಷಯ / ಸಮಸ್ಯೆಗಳನ್ನು ಮುಂದಿನ ಸಭೆಯೊಳಗಾಗಿ ನಿವಾರಣೇ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಸೂಚಿಸುತ್ತಾ ಸಭೆಯನ್ನು ಮುಕ್ತಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಹಿರಿಯ ಆರೋಗ್ಯ ಪರಿವೀಕ್ಷಕರು
ವಾರ್ಡ್ ಸಂಖ್ಯೆ: 194, ಗೊಟ್ಟಿಗೆರೆ.

ಪ್ರತಿಯನ್ನು:-

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ರವರ ಅವಗಾಹನೆಗೆ ಸಲ್ಲಿಸಿದೆ.
3. ಉಪ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಸಲ್ಲಿಸಿದೆ.
4. ಮುಖ್ಯ ಅಭಿಯಂತರರು (ಬೊಮ್ಮನಹಳ್ಳಿ) ರವರ ಅವಗಾಹನೆಗೆ ಸಲ್ಲಿಸಿದೆ.
5. ಅಧೀಕ್ಷಕ ಅಭಿಯಂತರರು (ಬೊಮ್ಮನಹಳ್ಳಿ) ರವರ ಅವಗಾಹನಗೆ ಸಲ್ಲಿಸಿದೆ.
6. ಕಾರ್ಯಪಾಲಕ ಅಭಿಯಂತರರು, ಬಿಬಿಎಂಪಿ, ಗೊಟ್ಟಿಗೆರೆ ರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಗೊಟ್ಟಿಗೆರೆ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
8. ಸಹಾಯಕ ನಿರ್ದೇಶಕರು (ಪಶುಪಾಲನೆ), ಗೊಟ್ಟಿಗೆರೆ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
9. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ (ಬೊಮ್ಮನಹಳ್ಳಿ) ವಲಯ ಬಿಬಿಎಂಪಿ.
10. ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ.
11. ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯಗಳು, ಬಿಬಿಎಂಪಿ
12. ಕಾರ್ಯಪಾಲಕ ಅಭಿಯಂತರರು, ಕೆರೆಗಳ ವಿಭಾಗ ಬಿಬಿಎಂಪಿ.
13. ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ ಬಿಬಿಎಂಪಿ.
14. ತೋಟಗಾರಿಕೆ ಅಧೀಕ್ಷಕರು, ಬೊಮ್ಮನಹಳ್ಳಿ ವಲಯ.
15. ಆರೋಗ್ಯ ವೈದ್ಯಾಧಿಕಾರಿಗಳು, ಬೊಮ್ಮನಹಳ್ಳಿ ವಲಯ.
16. ಆರೋಗ್ಯ ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ.
17. ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣಾ ವಿಭಾಗ.

Scanned by CamScanner

17. ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣಾ ವಿಭಾಗ.

18. ಸಹಾಯಕ ಕಂದಾಯ ಅಧಿಕಾರಿ ಅಂಜನಾಪುರ ವಿಭಾಗ.

19. ಕಲ್ಯಾಣಾಧಿಕಾರಿಗಳು ಬೊಮ್ಮನಹಳ್ಳಿ ವಲಯ.

20. ಉಪವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬೊಮ್ಮನಹಳ್ಳಿ ವಲಯ.

21. ಪೋಲೀಸ್ ಇನ್ಸಪೆಕ್ಟರ್, ಹುಳಿಮಾವು ಮತ್ತು ಕೋಣನಕುಂಟೆ ಪೋಲೀಸ್ ಠಾಣೆ.

22. ಕಂದಾಯ ಅಧಿಕಾರಿಗಳು, ಅಂಜನಾಪುರ ಉಪ ವಲಯ.

23. ಸ್ಥಳೀಯ ನಾಗರಿಕ ಕಲ್ಯಾಣ ಸಂಸ್ಥೆಗಳು.

Scanned by CamScanner